## ಕರ್ನಾಟಕ ಸರ್ಕಾರ

ಸಂಖ್ಯೆ:ಸಿಆಸುಇ 04 ಆರ್‌ಟಿಐ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಸಿಆಸುಇ (ಜನಸ್ಪಂದನ)
3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಮುಖ್ಯ ಗೋಪುರ,
ಬೆಂಗಳೂರು, ದಿನಾಂಕ:11.01.2013.

### ಸುತ್ತೋಲೆ

**ವಿಷಯ:** ಮಾಹಿತಿ ಹಕ್ಕು ಕಾಯ್ದೆ, 2005ರಡಿ ಮಾಹಿತಿ ಕೋರಿಕೆಗಳನ್ನು ಸ್ವೀಕರಿಸಿದ್ದಕ್ಕೆ ಮಾಹಿತಿ ಕೋರಿಕೆದಾರರಿಗೆ ಸೂಕ್ತ ಸ್ವೀಕೃತಿಯನ್ನು ನೀಡುವ ಬಗ್ಗೆ.

---

ಕರ್ನಾಟಕ ಮಾಹಿತಿ ಆಯೋಗವು ತನ್ನ ಮುಂದೆ ದಾಖಲಾಗಿದ್ದ ಪ್ರಕರಣ ಸಂಖ್ಯೆ:ಕೆಐಸಿ 2489 ಪಿಟಿಎನ್ 2012ರಲ್ಲಿ [ಶ್ರೀ ಜಿ.ವಿನ್ಸಂಟ್ ವಿರುದ್ಧ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)] ಮಾಹಿತಿ ಹಕ್ಕು ಕಾಯ್ದೆ, 2005ರಡಿ ಮಾಹಿತಿ ಕೋರಿಕೆಗಳನ್ನು ಸ್ವೀಕರಿಸಿದ್ದಕ್ಕೆ ಮಾಹಿತಿ ಕೋರಿಕೆದಾರರಿಗೆ ಸೂಕ್ತ ಸ್ವೀಕೃತಿಯನ್ನು ನೀಡುವ ಬಗ್ಗೆ ಸರ್ಕಾರಕ್ಕೆ ಸೂಚನೆಗಳನ್ನು ನೀಡಿರುತ್ತದೆ.

ಮಾಹಿತಿ ಹಕ್ಕು ಕಾಯ್ದೆ, 2005ರಡಿ ಮಾಹಿತಿ ಕೋರಿಕೆಗಳನ್ನು ಅಂಚೆ ಮೂಲಕವಾಗಲೀ ಅಥವಾ ಖುದ್ದು ಮಾಹಿತಿ ಕೋರಿಕೆದಾರರಿಂದಾಗಲೀ ಅಥವಾ ಇಲಾಖೆ/ಕಛೇರಿಯ ಮಾಹಿತಿ ಹಕ್ಕು ಕೋಶದ ಮೂಲಕವಾಗಲೀ ಸ್ವೀಕರಿಸುವ ಸಿಬ್ಬಂದಿಯು ಮಾಹಿತಿ ಕೋರಿಕೆಯು ಅಧಿಕೃತವಾಗಿ ಸ್ವೀಕೃತವಾಗಿದ್ದಕ್ಕೆ ಮಾಹಿತಿ ಕೋರಿಕೆದಾರರಿಗೆ ತನ್ನ ಸಹಿ, ದಿನಾಂಕ ಮತ್ತು ಇಲಾಖೆಯ ಮೊಹರಿನೊಂದಿಗೆ ತನ್ನ ಹೆಸರನ್ನೂ ಸಹ ಸ್ಪಷ್ಟವಾಗಿ ಬರೆದು ಸ್ವೀಕೃತಿಯನ್ನು ಕೊಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

(ಪರಮೇಶ್ ಪಾಂಡೆ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಜನಸ್ಪಂದನ)

ಇವರಿಗೆ.

1.ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
2.ಎಲ್ಲಾ ಇಲಾಖಾ ಮುಖ್ಯಸ್ಥರುಗಳು
3.ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು/ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
4.ಎಲ್ಲಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು

ಪ್ರತಿ:- ಮಾಹಿತಿಗಾಗಿ

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನಸೌಧ
3. ಕಾರ್ಯದರ್ಶಿಗಳು, ಕರ್ನಾಟಕ ಮಾಹಿತಿ ಆಯೋಗ, ಬಹು ಮಹಡಿ ಕಟ್ಟಡ.